**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸೆಷನ್ಸ್ ಕೇಸ್ ನಂಬ್ರ 126/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಪ್ರಕಾಶ್ ಎಸ್ | ಪ್ರಾಸಾಃ 11 |
| ತಂದೆಯ ಹೆಸರು | : | ಸುಬ್ರಮಣ್ಯ | ಚಾಸಾಃ 13 |
| ಪ್ರಾಯ | : | 40 ವರ್ಷ | **ದಿನಾಂಕಃ 18.12.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | PDO Venur Grama Panchayath | |
| ವಾಸಸ್ಥಳ | : | ಉಜಿರೆ, ಬೆಳ್ತಂಗಡಿ ತಾಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು 2019 ರಿಂದ ಸೆಪ್ಟೆಂಬರ್ 2025 ರವರೆಗೆ ಕೊಯ್ಯೂರು ಗ್ರಾಮ ಪಂಚಾಯತಿಯಲ್ಲಿ ಪಿ.ಡಿ.ಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ತನಿಖಾಧಿಕಾರಿಯವರು ಕೋರಿದಂತೆ, ಬೆಳ್ತಂಗಡಿ ಪೊಲೀಸ್ ಠಾಣೆಯ ಅಪರಾಧ ಕ್ರಮಾಂಕ 72/2024 ರಲ್ಲಿ ಘಟನೆಯಾದ ಮನೆ ನಂಬ್ರ 4/3(2) ರ ಮಾಲಿಕತ್ವದ ಬಗ್ಗೆ ವಿವರವನ್ನು ಕೇಳಿದ್ದು, ಅದರಂತೆ ನಾನು ನಮ್ಮ ಪಂಚಾಯಿತಿಯಲ್ಲಿರುವ ಮನೆ ತೆರಿಗೆ ರಿಜಿಸ್ಟರ್ ಪರಿಶೀಲಿಸಿ ಸದರಿ ಮನೆಯು ಶ್ರೀಮತಿ ಶುಭಲತಾ ಕೋಂ ಸಂಜೀವ ನೇಕಾರ ಮೈಂದಕೋಡಿ, ಇವರ ಹೆಸರಿನಲ್ಲಿ ಇರುವುದಾಗಿ ದಿನಾಂಕ 25.07.2024 ರಂದು ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು **ನಿಪಿ-17** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-17(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ವಿ.ಆರ್.ಎ. ವಕೀಲರಿಂದಃ</u>**

ಆರೋಪಿ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.